ಮಧ್ಯಂತರ ಅರ್ಜಿಯ ಆದೇಶದಂತೆ ದಿನಾಂಕಃ **17.03.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆ:- ಪ್ರತಿವಾದಿ ಪರವಾಗಿ **Sri. PMN,** ವಕೀಲರಿಂದ

1. ದಿಃ 05.10.2006 ರ ದಾನಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ.76 ಎಂದು ಗುರುತಿಸಲಾಯಿತು.

2. ದಿಃ 03.06.2017 ರಂದು ಜಿಲ್ಲಾಧಿಕಾರಿಗಳಿಗೆ ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಬರೆದಿರುವ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ.77 ಎಂದು ಗುರುತಿಸಲಾಯಿತು.

3. ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮದ ಫಲಾನುಭವಿಗಳ ವಿವರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ.78 ಎಂದು ಗುರುತಿಸಲಾಯಿತು.

4. ತಾಲೂಕ ಪಂಚಾಯತಿ ಶಿರಹಟ್ಟಿ ಇವರ ದಿಃ 18.11.2014 ರ ನಡಾವಳಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ.79 ಎಂದು ಗುರುತಿಸಲಾಯಿತು.

5. ಸರ್ವೇ ನಂ.1/2 ರ ಪಂಚಾಯತಿ ಭೂ ಕರ ಆಕರಣೆಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು, ವಾದಿ ಪರ ವಕೀಲರು ಸದರಿ ಮೂಲ ಪ್ರತಿಯನ್ನು ಹಾಜರುಪಡಿಸದೆ ಇರುವುದರಿಂದ ಮೂಲ ಪ್ರತಿಯನ್ನು ಹಾಜರುಪಡಿಸುವ

ತಕರಾರಿಗೆ ಒಳಪಟ್ಟು ಗುರುತಿಸುವಂತೆ ಆಕ್ಷೇಪಣೆ ತೆಗೆದಿರುತ್ತಾರೆ, ಸದರಿ ದಾಖಲೆಯನ್ನು ತಕರಾರಿಗೆ ಒಳಪಟ್ಟು ನಿಡಿ.80 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ವಾದಿ ಪರ ವಕೀಲರು ಹಾಜರಿದ್ದು ತಮ್ಮ ಪರವಾಗಿ ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.</u>

<u>(ನನ್ನ ಉಖ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಲಕ್ಷ್ಮೇಶ್ವರ